ವಿಪತ್ತುಗಳಿಂದ ಲೀಲಾಜಾಲವಾಗಿ ಪಾರಾಗುವ ಅಂತಃಕರಣದ ಕಥನವನ್ನು ಇಲ್ಲಿ ನೀಡಿದ್ದಾರೆ. ಯೋಗಪ್ಪನವರ್ ಅವರು ತಮ್ಮ ನಾಟಕ, ಕತೆ, ಕಾದಂಬರಿಗಳಿಗೆ ಬಳಸಿದ ಭಾಷೆ ಕಾವ್ಯಾತ್ಮಕವಾದ ಗದ್ಯ. ಅವರ ಕಾದಂಬರಿಯ ಪುಟ್ಟ ಪುಟ್ಟ ಅಧ್ಯಾಯಗಳನ್ನು ಓದುವುದೆಂದರೆ ಕಾವ್ಯದ ತುಣುಕುಗಳನ್ನು ಓದಿದ ಅನುಭವವಾಗುತ್ತದೆ. 'ನನ್ನ ಅವ್ವ ರಹಸ್ಯದ ಕರಿಮಣಿ ಸರ. ಪುಣ್ಯಕೋಟಿಯ ಕಣ್ಣು. ಶಿವನ ಮೈಮೇಲಿನ ಬೂದಿ. ಜೀವಸಂಕುಲದ ಧಾನ್ಯ... ಬಿಳಿಜೋಳದ ದಂಟಿನಗುಂಟ ಇಳಿದ ಸಕ್ಕರೆಯ ಪಾಕ... ಸಿಡಿಲಿನ ಮೈಯೊಳಗಿನ ಬೆಳ್ಳಿಯ ಗೆರೆ. ಆಕೆ ಸೂರ್ಯನಂತೆ ಕಂಡರೂ ಮಕ್ಕಳ ಪಾಲಿಗೆ ಚಂದ್ರನ ದಯೆ.' ಈ ಸಾಲುಗಳನ್ನು ಕಾವ್ಯವೆಂದು ಓದದೆ ಇರುವುದಾರೂ ಹೇಗೆ? 'ಕಾವ್ಯಾತ್ಮಕ ಗದ್ಯದ ಬಗ್ಗೆ ಕನಸುವ ಹಾಗೂ ಆ ಪವಾಡಕ್ಕಾಗಿ ನಿರೀಕ್ಷಿಸುವ' ಆಸೆಯನ್ನು ಯೋಗಪ್ಪನವರಲ್ಲಿ ಪ್ರಚೋದಿಸಿದವನು ಮತ್ತೆ ಅದೇ ಬೋದಿಲೇರ್. ಅವನು ಹಂಬಲಿಸಿದ ಭಾಷೆಯು 'ಬೇಕೆಂದ ಕಡೆ ಬಾಗುವ, ಬಗ್ಗುವ, ಉದ್ದೀಪ್ತ ಭಾವನೆಗಳಿಗೆ ಮೈಕೊಡುವಂತಹದ್ದು'. 'ಆತ್ಮಸಾಕ್ಷಿಯ ಜಿಗಿತಗಳನ್ನು ಗಟ್ಟಿಯಾಗಿ ಹಿಡಿಯುವ' ಕಾವ್ಯಾತ್ಮಕ ಗದ್ಯ ಅದಾಗಿತ್ತು. ಅಂತಹದ್ದನ್ನು ಕನ್ನಡದ ನುಡಿಗಟ್ಟುಗಳಿಗೆ ಸರಿಹೊಂದುವಂತೆ ಯೋಗಪ್ಪನವರ್ ತಮ್ಮ ಬರವಣಿಗೆಯಲ್ಲಿ ಸಾಧಿಸಿದರು. ಹೀಗಾಗಿ ಅವರ ಭಾಷೆಗೆ ಅವರದೇ ಆದ ಮುದ್ರೆಯಿದೆ. ಸಂಕೀರ್ಣವಾದ ಸತ್ಯದರ್ಶನವನ್ನು ಸಮರ್ಥವಾಗಿ ಓದುಗನಿಗೆ ತಲುಪಿಸುವಲ್ಲಿ ಯೋಗಪ್ಪನವರ್ ಅವರನ್ನು ಭಾಷೆಯು ಅಲ್ಲಾವುದ್ದೀನನ ಮಾಯಾದೀಪದ ಹಾಗೆ ಸದಾ ಕೈಹಿಡಿದು ನಡೆಸಿದೆ.

ಅವರು ಪಾರಂಪರಿಕ ಬರವಣಿಗೆಯ ನಡಿಗೆಯ ಆಚೆ ಪಯಣಿಸುತ್ತ, ಹೊಸದೇನನ್ನೋ ಕೊಡಲು ಒಬ್ಬಂಟಿಯಾಗಿಯೇ ಸಂಚರಿಸಿದರು. ಇದನ್ನು ಗಮನಿಸಿರುವ ಕವಿ ಕೆ.ವಿ. ತಿರುಮಲೇಶ್ ಅವರು ಯೋಗಪ್ಪನವರ್ ಅವರ ಅನುವಾದಿತ ಕೃತಿ 'ಹದಿಹರೆಯದ ಒಬ್ಬಂಟಿ ಪಯಣ' ಕುರಿತು ಬರೆಯುತ್ತ, 'ಜೆ.ಡಿ. ಸ್ಯಾಲಿಂಜರ್ ತನ್ನ ಹೆಚ್ಚಿನ ಜೀವನವನ್ನು ಅಜ್ಞಾತವಾಗಿಯೇ ಕಳೆದವ. ಅಂಥಾದ್ದೊಂದು ಮಹಿಮೆ ಅವನ ಸುತ್ತ ಹೆಣೆದುಕೊಂಡಿದೆ... ಇನ್ನು ಯೋಗಪ್ಪನವರ್ ಕೂಡ ಒಂದು ತರಹದಲ್ಲಿ ತಮ್ಮನ್ನು ತಾವು ಅಡಗಿಸಿಕೊಂಡವರು... ಕೆಲವು ಸಲ ಲಂಕೇಶ್ ಜತೆ ಕಾಣಿಸಿಕೊಳ್ಳುತ್ತಿದ್ದರು; ಉಳಿದಂತೆ ಅವರು ಅಜ್ಞಾತವನ್ನೇ ಬಯಸುವವರು' ಎಂದು ಹೇಳಿರುವರು. ಯೋಗಪ್ಪನವರ್ ಅವರನ್ನು ಸಮೀಪದಿಂದ ಬಲ್ಲ ಯಾರಿಗಾದರೂ ತಿರುಮಲೇಶ್ ಅವರ ಈ ಮಾತು ಸತ್ಯವೆನ್ನಿಸದೆ ಇರಲಾರದು.


**ಚನ್ನಪ್ಪ ಕಟ್ಟಿ**

ಕತೆಗಾರ ಕಟ್ಟಿ ನಿವೃತ್ತ ಇಂಗ್ಲಿಷ್ ಅಧ್ಯಾಪಕರು. ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಹಿರೇಹಾಳ ಗ್ರಾಮದವರು. ಪ್ರಸ್ತುತ ಸಿಂದಗಿಯಲ್ಲಿ ನೆಲೆಸಿದ್ದಾರೆ.

'ಇಂಡಿಯದಲ್ಲಿ', 'ನೆನಪುಗಳು ಸಾಯುವುದಿಲ್ಲ', 'ಸೂರ್ಯನಿಗೆ ಸಾವ ನೋಡಲು ಬೇಸರವಿಲ್ಲ' ಎಂಬ ಕವನ ಸಂಕಲನಗಳನ್ನು, 'ಮುಳುಗಡೆ ಮತ್ತು ಇತರ ಕತೆಗಳು', 'ಬೆಂಕಿ ಇರದ ಬೆಳಕು', 'ಏಕತಾರಿ' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಸಾರಣೆ' ಅವರ ವಿಮರ್ಶಾ ಸಂಕಲನ. 'ಕಸವರಮೆಂಬುದು...' ವೈಚಾರಿಕ ಲೇಖನಗಳ ಪುಸ್ತಕವಾಗಿದೆ. ಜಾಕ್ ಲಂಡನ್‌ನ 'ಸ್ಕಾರ್ಲೆಟ್ ಪ್ಲೇಗ್' ಕಾದಂಬರಿಯನ್ನು ಅನುವಾದಿಸಿದ್ದಾರೆ. ಅವಧೂ ಬನಸಿದ್ಧ ಹಿರಕೂರ ಹಾಡಿದ 'ಅಮೋಘಸಿದ್ಧ ಜನಪದ ಮಹಾಕಾವ್ಯ'ವನ್ನು ಸಂಪಾದಿಸಿದ್ದಾರೆ.